# ಲೆಂಥ್ ಅಲ್ಲ, ಸ್ಟ್ರೆಂಥ್ ಮುಖ್ಯ!

ಪದ್ಮನಾಭ ಭಟ್



ಹುಟ್ಟಿದ್ದು ವಾರಾಣಸಿಯಲ್ಲಿ. ಶಿಕ್ಷಣ ಆರಂಭವಾಗಿದ್ದು ಉತ್ತರ ಪ್ರದೇಶದ ಅಜಮ್‌ಗಢದಲ್ಲಿ. ನಂತರ ವಲಸೆ ಹೋಗಿದ್ದು ಮುಂಬೈಗೆ. ಹೀಗೆ ಹಲವು ಭಿನ್ನ ಗುಣದ ನೆಲದಲ್ಲಿ ಬೇರು ಬಿಟ್ಟು ಬೆಳೆದ ಹುಡುಗಿ ಶಾನ್ವಿ ಶ್ರೀವಾಸ್ತವ್‌ಗೆ ಬಣ್ಣದ ಬದುಕಿನ ಕೊಳಲ ಕರೆ ನೀಡಿದ್ದು ಮಾತ್ರ ದಕ್ಷಿಣ ಭಾರತದ ನೆಲ. 2012ರಲ್ಲಿ 'ಲವ್ಲೀ' ಎಂಬ ಹೆಸರಿನ ತೆಲುಗು ಸಿನಿಮಾ ಮೂಲಕ ನಟನೆಯ ದಾರಿಯಲ್ಲಿ ಹೆಜ್ಜೆಯಿಟ್ಟ ಶಾನ್ವಿ, ಕನ್ನಡಕ್ಕೆ ಅಡಿಯಿಟ್ಟಿದ್ದು 2014ರಲ್ಲಿ 'ಚಂದ್ರಲೇಖ' ಸಿನಿಮಾದಲ್ಲಿ ಮುದ್ದು ಮುಖದ ದೆವ್ವವಾಗಿ! ನಂತರ ಮಾಸ್ಟರ್‌ಪೀಸ್, ಸುಂದರಾಂಗ ಜಾಣ, ಸಾಹೇಬ, ತಾರಕ್, ಮಫ್ತಿ ಹೀಗೆ ಹಲವು ಸ್ಟಾರ್‌ನಟರ ಸಿನಿಮಾಗಳಲ್ಲಿ ತೆರೆಯನ್ನು ಹಂಚಿಕೊಂಡ ಶಾನ್ವಿ ಸದ್ಯ ರಕ್ಷಿತ್ ಶೆಟ್ಟಿ ಅಭಿನಯಿಸಿರುವ ಮಹತ್ವಾಕಾಂಕ್ಷೆಯ ಸಿನಿಮಾ 'ಅವನೇ ಶ್ರೀಮನ್ನಾರಾಯಣ' ಸಿನಿಮಾದ ನಿರೀಕ್ಷೆಯಲ್ಲಿದ್ದಾರೆ.

**◆ ಕನ್ನಡ ಚಿತ್ರರಂಗದಲ್ಲಿ ಇಲ್ಲಿವರೆಗಿನ ನಟನಾ ಪ್ರಯಾಣ ಹೇಗಿತ್ತು?**

ಪ್ರತಿ ಸಿನಿಮಾ ಮುಗಿದು, ಬಿಡುಗಡೆ ಆದಾಗಲೂ ನಮ್ಮ ಸಿಚುವೇಶನ್ ಬದಲಾಗುತ್ತದೆ; ಪೊಜಿಶನ್ ಬದಲಾಗುತ್ತದೆ. ಅದು ಒಳ್ಳೆಯದೇ. ಪ್ರತಿಯೊಂದು ಸಿಚುವೇಶನ್ ಮತ್ತು ಪೊಜಿಶನ್‌ಗಳನ್ನೂ ನಾನು ಖುಷಿಯಿಂದ ಅನುಭವಿಸಿದ್ದೇನೆ. ಎಲ್ಲವೂ ಸುರಳೀತವಾಗಿ ನಡೆದುಹೋಯ್ತು ಎಂದು ನಾನು ಹೇಳಲಾರೆ. ನಾನು ಕಷ್ಟದ ಹಂತವನ್ನೂ ಕಂಡಿದ್ದೇನೆ. ಅವೆಲ್ಲ ಇರುವುದೇ. ಅಂತಿಮವಾಗಿ ನಾವು ಏನನ್ನು ಸಾಧಿಸುತ್ತೇವೆ, ಏನನ್ನು ಪಡೆದುಕೊಳ್ಳುತ್ತೇವೆ ಎನ್ನುವುದು ಮುಖ್ಯ.

**◆ 'ಚಂದ್ರಲೇಖ' ಸಿನಿಮಾದ ನಟಿ ಶಾನ್ವಿಗೂ ಈಗಿನ ಶಾನ್ವಿಗೂ ಏನು ವ್ಯತ್ಯಾಸಗಳಾಗಿವೆ?**

ತುಂಬಾ ಬದಲಾವಣೆಗಳು ಆಗಿವೆ. ಈಗ ನಾನು ತುಂಬ ಸ್ಟ್ರಾಂಗ್ ಆಗಿದ್ದೀನಿ. 'ಚಂದ್ರಲೇಖ' ಸಮಯದಲ್ಲಿ ಇದು ಹೊಸ ಇಂಡಸ್ಟ್ರಿ ಎಂಬ ಹಿಂಜರಿಕೆ ಇತ್ತು. ಆದರೆ ಈಗ ಎಲ್ಲರಿಗೂ ನಾನು ಯಾರು ಅಂತ ಗೊತ್ತು. ನನಗೆ ಎಲ್ಲರ ಬಗ್ಗೆಯೂ ಗೊತ್ತು. ಆ ಕಂಫರ್ಟ್ ಲೆವಲ್ಲಿಗೆ ಬಂದಿದ್ದೇನೆ. ಇದು ಖುಷಿಕೊಡುತ್ತದೆ. ಆದರೂ ನಾನು ಮೊದ ಮೊದಲ ಸಿನಿಮಾಗಳಲ್ಲಿ ಇದ್ದ ಮುಗ್ಧತೆಯನ್ನು, ತಾಜಾತನದ